# ಸಾಮಾಜಿಕ ಮಾಧ್ಯಮಗಳಲ್ಲಿ ಮಂಗಳೂರು ಕನ್ನಡ, ಅರೆಭಾಷೆ ಮತ್ತು ಹವ್ಯಕ ಭಾಷೆಯ ಅಸ್ಮಿತೆ: ಸಮಾಜೋಭಾಷಿಕ ಅಧ್ಯಯನ

**ಲಾವಣ್ಯ ಸಿ.ಪಿ.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶೇಷಾದ್ರಿಪುರಂ ಪದವಿ ಕಾಲೇಜು, ಮೈಸೂರು.

**DOI: https://doi.org/10.5281/zenodo.18788168**

## ABSTRACT:

ಕನ್ನಡದ ಪ್ರಾದೇಶಿಕ ವೈವಿಧ್ಯತೆಯನ್ನು ಸಾರುವ ಮಂಗಳೂರು ಕನ್ನಡ, ಅರೆಭಾಷೆ ಮತ್ತು ಹವ್ಯಕ ಭಾಷೆಗಳು ಸಾಮಾಜಿಕ ಮಾಧ್ಯಮಗಳ ಮೂಲಕ ಜಾಗತಿಕ ಮನ್ನಣೆ ಪಡೆಯುತ್ತಿವೆ. ಹಿಂದೆ ಕೇವಲ ಮನೆಮಾತಿಗೆ ಸೀಮಿತವಾಗಿದ್ದ ಈ ಉಪಭಾಷೆಗಳು, ಇಂದಿನ ಡಿಜಿಟಲ್ ಯುಗದಲ್ಲಿ ರೀಲ್ಸ್, ವ್ಲಾಗ್ ಮತ್ತು ಹಾಸ್ಯ ವೀಡಿಯೋಗಳ ಮೂಲಕ ಹೊಸ ಅಸ್ಮಿತೆಯನ್ನು ಕಂಡುಕೊಂಡಿವೆ. ಇನ್‌ಸ್ಟಾಗ್ರಾಮ್, ಫೇಸ್‌ಬುಕ್ ಮತ್ತು ಯೂಟ್ಯೂಬ್‌ಗಳಂತಹ ವೇದಿಕೆಗಳು ಯುವಜನತೆಯಲ್ಲಿ ಭಾಷಾಭಿಮಾನವನ್ನು ಹೆಚ್ಚಿಸಿ, ಕೀಳರಿಮೆಯನ್ನು ಹೋಗಲಾಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ. ತಂತ್ರಜ್ಞಾನವು ಕೇವಲ ಮನರಂಜನೆಗೆ ಮಾತ್ರವಲ್ಲದೆ, ದೇಸೀ ಸಂಸ್ಕೃತಿ ಮತ್ತು ಭಾಷಾ ಸಂರಕ್ಷಣೆಗೆ ಹೇಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಇಲ್ಲಿ ಸಮಾಜೋಭಾಷಿಕ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಆಧುನಿಕ ಮಾಧ್ಯಮಗಳು ಪ್ರಾದೇಶಿಕ ಭಾಷೆಗಳ ಉಳಿವಿಗೆ ಮತ್ತು ಜಾಗತೀಕರಣಕ್ಕೆ ನೀಡುತ್ತಿರುವ ಕೊಡುಗೆಯನ್ನು ಈ ಅಧ್ಯಯನವು ಗುರುತಿಸುತ್ತದೆ.

## KEYWORDS:

ಸಾಮಾಜಿಕ ಮಾಧ್ಯಮ, ಭಾಷಾ ಅಸ್ಮಿತೆ, ಕನ್ನಡ ಉಪಭಾಷೆಗಳು, ಡಿಜಿಟಲ್ ಕ್ರಾಂತಿ, ಸಮಾಜೋಭಾಷಿಕ ಅಧ್ಯಯನ.

**ಪೀಠಿಕೆ:**

ಭಾಷೆ ಎಂಬುದು ಕೇವಲ ಸಂವಹನ ಮಾಧ್ಯಮ ಮಾತ್ರ ಆಗಿರದೆ ಆ ಭಾಷೆಯನ್ನಾಡುವ ಸಮುದಾಯದ ಸಂಸ್ಕೃತಿಯ ಜೀವನಾಡಿಯಾಗಿದೆ. ಭಾಷೆ ಯಾವುದೇ ಸಮುದಾಯದ ಅಸ್ಮಿತೆಯ ಪ್ರತಿಬಿಂಬವಾಗಿದೆ. ಕನ್ನಡದ ಭಾಷಾ ಪರಿವಾರವು ಅತ್ಯಂತ ವೈವಿಧ್ಯಮಯವಾಗಿದ್ದು, ಕನ್ನಡದ ಪ್ರಾದೇಶಿಕ ಉಪಭಾಷೆಗಳು ಕರ್ನಾಟಕದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ. ಕರ್ನಾಟಕದ ಪ್ರತಿ ಜಿಲ್ಲೆಯೂ ತನ್ನದೇ ಆದ ವಿಶಿಷ್ಟ ಉಪಭಾಷಾ ಸೊಗಡನ್ನು ಹೊಂದಿದೆ. ಅವುಗಳಲ್ಲಿ ವಿಶೇಷವಾಗಿ ರಾಜ್ಯದ ಮಂಗಳೂರು ಕನ್ನಡ, ಹವ್ಯಕ ಭಾಷೆ ಹಾಗೂ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿಗಳಾದ ಗೌಡ ಸಮುದಾಯದವರು ಮಾತನಾಡುವ ಅರೆಭಾಷೆ ಅಥವಾ ಗೌಡ ಕನ್ನಡವು ತಮ್ಮದೇ ಆದ ಶಬ್ದಕೋಶ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿವೆ. ಕಳೆದ ದಶಕದವರೆಗೆ ಈ ಉಪಭಾಷೆಗಳು ಕೇವಲ ಆಯಾ ಪ್ರದೇಶದ ಮನೆಮಾತುಗಳಿಗೆ ಅಥವಾ ಜಾನಪದ ಕಲೆಗಳಿಗೆ ಸೀಮಿತವಾಗಿದ್ದವು. ಆದರೆ ಇಂದಿನ ಡಿಜಿಟಲ್ ಕ್ರಾಂತಿ ಮತ್ತು ಸಾಮಾಜಿಕ ಮಾಧ್ಯಮಗಳ ಹುಟ್ಟು ಈ ಭಾಷಿಕ ಗಡಿಗಳನ್ನು ಅಳಿಸಿ ಹಾಕಿವೆ. ಇದರಿಂದ ಮಂಗಳೂರು ಕನ್ನಡ ಭಾಷಿಕ, ಹವ್ಯಕ ಭಾಷಿಕ ಮತ್ತು ಅರೆಭಾಷಿಕ ಯುವಜನತೆ ತಮ್ಮ ಭಾಷೆಯನ್ನು ಕೀಳರಿಮೆಯಿಂದ ನೋಡುವುದನ್ನು ಬಿಟ್ಟು ಅದನ್ನು ಹೆಮ್ಮೆಯ ಅಸ್ಮಿತೆಯನ್ನಾಗಿ ಸ್ವೀಕರಿಸುತ್ತಿದ್ದಾರೆ. ಹಾಸ್ಯದ ತುಣುಕುಗಳು, ಕಿರು ವೀಡಿಯೋಗಳು (ರೀಲ್ಸ್) ಮತ್ತು ವ್ಲಾಗ್‌ಗಳ ಮೂಲಕ ಈ ಭಾಷೆಗಳು ಇಂದು ಲಕ್ಷಾಂತರ ಜನರನ್ನು ತಲುಪುತ್ತಿವೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಮಾಧ್ಯಮಗಳು ಈ ಉಪಭಾಷೆಗಳ ಅಸ್ಮಿತೆಯನ್ನು ಹೇಗೆ ರೂಪಿಸುತ್ತಿವೆ ಮತ್ತು ಈ ಭಾಷಾ ಸಂರಕ್ಷಣೆಯಲ್ಲಿ ಸಾಮಾಜಿಕ ಮಾಧ್ಯಮಗಳ ಪಾತ್ರವೇನು ಎಂಬುದರ ಕುರಿತು ಅಧ್ಯಯನ ಮಾಡುವುದು ಈ ಅಧ್ಯಯನದ ಪ್ರಮುಖ ಆಶಯವಾಗಿದೆ.

**ಅಧ್ಯಯನದ ವಿಧಾನ:**

ಕನ್ನಡದ ಉಪಭಾಷೆಗಳಾಗಿರುವ ಮಂಗಳೂರು ಕನ್ನಡ ಭಾಷೆ, ಹವ್ಯಕ ಭಾಷೆ ಮತ್ತು ಅರೆಭಾಷೆ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡು ತನ್ನ ಅಸ್ಮಿತೆಯನ್ನು ಕಂಡುಕೊಂಡಿರುವುದನ್ನು ಗುಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನ ವಿಧಾನದ ಮೂಲಕ ಕಂಡುಕೊಳ್ಳಲಾಗಿದೆ.

**ಅಧ್ಯಯನದ ಉದ್ದೇಶ:**

ಸಾಮಾಜಿಕ ಮಾಧ್ಯಮಗಳು ಹೇಗೆ ಈ ಉಪಭಾಷೆಗಳ ಬೆಳವಣಿಗೆಗೆ ಕಾರಣವಾಗಿವೆ? ಈ ಮೂಲಕ ಆ ಪ್ರದೇಶದ ಭಾಷಿಕರು ತಮ್ಮ ಭಾಷೆಯ ಅಸ್ಮಿತೆಯನ್ನು ಹೇಗೆ ಉಳಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

**ಅಧ್ಯಯನದ ವ್ಯಾಪ್ತಿ:**

ಸಾಮಾಜಿಕ ಉಪಭಾಷೆಗಳಾದ ಮಂಗಳೂರು ಕನ್ನಡ, ಹವ್ಯಕ ಕನ್ನಡ ಹಾಗೂ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಅರೆಭಾಷೆಗಳ ವೀಡಿಯೋಗಳು, ಕಿರು ವೀಡಿಯೋಗಳು (ರೀಲ್ಸ್), ವೈಯಕ್ತಿಕ ಖಾತೆಗಳು, ನಿರ್ದಿಷ್ಟ ಪೇಜ್‌ಗಳು ಇತ್ಯಾದಿಗಳನ್ನೊಳಗೊಂಡ ಇನ್ಸ್ಟಾಗ್ರಾಮ್, ಫೇಸ್‌ಬುಕ್ ಮತ್ತು ಯೂಟ್ಯೂಬ್ ಸಾಮಾಜಿಕ ಮಾಧ್ಯಮಗಳನ್ನು ಮಾತ್ರ ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

**ಫಲಿತಗಳು:**

- ಸಾಮಾಜಿಕ ಮಾಧ್ಯಮಗಳು ಕನ್ನಡ ಉಪಭಾಷೆಗಳ ಜಾಗತೀಕರಣಕ್ಕೆ ಕಾರಣವಾಗಿವೆ.
- ಸಾಮಾಜಿಕ ಮಾಧ್ಯಮಗಳ ಮೂಲಕ ಈ ಉಪಭಾಷಿಕರು ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸುತ್ತಿದ್ದಾರೆ.
- ಇದು ಕೇವಲ ಮನರಂಜನೆಯ ಸಾಧನವಾಗದೆ, ಪ್ರಾದೇಶಿಕ ಸಂಸ್ಕೃತಿ ಮತ್ತು ಭಾಷೆಯ ಸಂರಕ್ಷಣಾ ಕವಚವಾಗಿ ಕಾರ್ಯನಿರ್ವಹಿಸುತ್ತಿದೆ.
- ಸಾಮಾಜಿಕ ಮಾಧ್ಯಮಗಳಲ್ಲಿ ಈ ಉಪಭಾಷೆಗಳು ಗುರುತಿಸಿಕೊಂಡಿರುವುದರಿಂದ ಈ ಭಾಷಿಕರಿಗೆ ತಮ್ಮ ಭಾಷೆಯ ಬಗ್ಗೆ ಕೀಳರಿಮೆ ದೂರವಾಗಿದೆ.
- ಸಾಮಾಜಿಕ ಮಾಧ್ಯಮಗಳು ಈ ಉಪಭಾಷೆಗಳ ಸಾಹಿತ್ಯ ರಚನೆಗೂ ಪ್ರೇರಣೆಯಾಗಿವೆ.

**ಸಾಮಾಜಿಕ ಮಾಧ್ಯಮ ಮತ್ತು ಸಮಾಜ:**

ಮಾಧ್ಯಮ ವಲಯದಲ್ಲಿ ಹಿಂದಿನಿಂದ ಪತ್ರಿಕೆ, ರೇಡಿಯೋ, ಟೆಲಿವಿಷನ್, ರಂಗಭೂಮಿ, ಚಲನಚಿತ್ರ ವ್ಯಾಪಕವಾಗಿ ಬೆಳೆದು ಹಲವಾರು ವರ್ಷಗಳು ತಮ್ಮ ಅಸ್ತಿತ್ವವನ್ನು ಕಾಯ್ದುಕೊಂಡು ಬಂದವು. ಇವುಗಳನ್ನು ಸಮೂಹ ಮಾಧ್ಯಮಗಳೆಂದು ಗುರುತಿಸಲಾಯಿತು. ಇಂದು ವೇಗವಾಗಿ ಬೆಳೆಯುತ್ತಿರುವ ಆಧುನಿಕ ಕಾಲದಲ್ಲಿ ಸಾಮಾಜಿಕ ಮಾಧ್ಯಮಗಳ ಸಾಲಿಗೆ ಮೊಬೈಲ್, ಮೊಬೈಲ್ ಮೂಲಕ ಅಂತರ್ಜಾಲ ಬಳಕೆ ಪ್ರವೇಶವಾಯಿತು. ಮೊಬೈಲ್ ಮತ್ತು ಅಂತರ್ಜಾಲದ ಮೂಲಕ ಸಾಮಾಜಿಕ ಮಾಧ್ಯಮಗಳು ಅತ್ಯಂತ ವೇಗವಾಗಿ ಮುಂಚೂಣಿಗೆ ಬಂದವು. ಈ ಬದಲಾವಣೆಯು ಕೇವಲ ತಾಂತ್ರಿಕವಾಗಿರದೆ, ಜನರ ಜೀವನಶೈಲಿಯನ್ನೇ ಬದಲಿಸಿತು. ಹಿಂದೆ ಸುದ್ದಿಗಾಗಿ ಮರುದಿನದ ಪತ್ರಿಕೆ ಅಥವಾ ರಾತ್ರಿಯ ಸುದ್ದಿಯ ತನಕ ಕಾಯಬೇಕಿತ್ತು. ಆದರೆ ಇಂದು ಕ್ಷಣಾರ್ಧದಲ್ಲಿ ಜಗತ್ತಿನ ಯಾವುದೇ ಮೂಲೆಯ ವಿಷಯವು ಸಾಮಾಜಿಕ ಮಾಧ್ಯಮಗಳ ಮೂಲಕ ಜನರನ್ನು ತಲುಪುತ್ತಿದೆ. ಪಾರಂಪರಿಕವಾದ ಮಾಧ್ಯಮಗಳಲ್ಲಿ ನಾವು ಕೇವಲ ವೀಕ್ಷಕರಾಗಿದ್ದೆವು. ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶಗಳು ತೀರಾ ಅಲ್ಪವಾಗಿದ್ದವು. ಆದರೆ ಸಾಮಾಜಿಕ ಮಾಧ್ಯಮಗಳು ಪ್ರತಿಯೊಬ್ಬರಿಗೂ ತಮ್ಮ

ಅಭಿಪ್ರಾಯ ವ್ಯಕ್ತಪಡಿಸಲು ಒಂದು ವೇದಿಕೆಯನ್ನು ಕಲ್ಪಿಸಿವೆ. ಜೊತೆಗೆ ಸಾಮಾನ್ಯ ಜನರನ್ನೂ ಮಾಹಿತಿ ಹಂಚುವವರನ್ನಾಗಿ ಪರಿವರ್ತಿಸಿದೆ.

**ಮನರಂಜನೆಯ ಹೊಸ ಆಯಾಮ:**

ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್‌ನಂತಹ ಅಪ್ಲಿಕೇಶನ್‌ಗಳು ಜನರ ಆಸಕ್ತಿಗೆ ಅನುಗುಣವಾಗಿ ಅವರಿಗೆ ಮನರಂಜನೆಯನ್ನು ನೀಡುವ ಮೂಲಕ ಅವರ ಸಮಯವನ್ನು ತನ್ನೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಸಾಮಾಜಿಕ ಮಾಧ್ಯಮಗಳು ಜನಮನವನ್ನು ತನ್ನೆಡೆಗೆ ಸೆಳೆಯಲು ಮುಖ್ಯ ಕಾರಣವೆಂದರೆ ಅವುಗಳ ಸರಳತೆ ಮತ್ತು ವೈಯಕ್ತಿಕ ಸಂಪರ್ಕ ಹಾಗೂ ಪ್ರತಿಯೊಬ್ಬರಿಗೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಮುಕ್ತ ಅವಕಾಶವಿರುವುದಾಗಿದೆ. ಇದರಿಂದ ಇವು ಇಂದು ಕೇವಲ ತಂತ್ರಜ್ಞಾನವಾಗಿ ಉಳಿದಿಲ್ಲ, ಬದಲಾಗಿ ಮನುಷ್ಯನ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿವೆ. ಇವುಗಳ ಮೂಲಕ ಜನರು ತಮಗೆ ಬೇಕಾದ ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದಾರೆ ಮತ್ತು ತಮಗೆ ತಿಳಿದ ಮಾಹಿತಿಗಳನ್ನು ಹಂಚುತ್ತಿದ್ದಾರೆ. ಜನಾಂಗ, ಭಾಷೆ, ಆಚರಣೆಗಳು, ಹಾಸ್ಯ, ಪದ್ಧತಿಗಳು, ಅಡುಗೆ, ಜನಪದ, ಪ್ರವಾಸ, ಸಂಗೀತ, ನೃತ್ಯ, ಸಾಹಿತ್ಯ ಮುಂತಾದವುಗಳನ್ನು ಅಂಗೈಯಲ್ಲಿರುವ ಮೊಬೈಲ್‌ಗಳ ಮೂಲಕ ಜಗತ್ತಿಗೆ ಹಂಚುವ ಕೆಲಸವನ್ನು ಇಂದು ವ್ಯಕ್ತಿ ಮಾಡುತ್ತಿದ್ದಾನೆ. ಅಮೆರಿಕಾದ ಪ್ರಜೆಯೂ ಭಾರತದ ದಕ್ಷಿಣದ ಸಂಸ್ಕೃತಿಯ ಬಗ್ಗೆ, ಭಾಷೆಯ ಬಗ್ಗೆ ತಿಳಿದುಕೊಳ್ಳುತ್ತಿದ್ದಾನೆ. ಇದರ ಉಪಯೋಗವನ್ನು ಭಾಷಾ ಪ್ರಭೇಧಗಳು ಮತ್ತು ಉಪಭಾಷೆಗಳು ಇಂದು ಹೆಚ್ಚಿಗೆ ಪಡೆದುಕೊಂಡಿರುವುದನ್ನು ಕಾಣಬಹುದು.

**ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಾದೇಶಿಕ ಉಪಭಾಷೆಗಳಾದ ಮಂಗಳೂರು ಕನ್ನಡ, ಅರೆಭಾಷೆ ಮತ್ತು ಹವ್ಯಕ ಭಾಷೆ:**

ಸಾಮಾಜಿಕ ಮಾಧ್ಯಮಗಳು ಕೇವಲ ಮಾಹಿತಿ ವಿನಿಮಯದ ಸಾಧನವಾಗದೆ, ಭಾಷೆಯನ್ನು ಉಳಿಸಿ ಬೆಳೆಸುವಲ್ಲಿ ಅತ್ಯಂತ ಶಕ್ತಿಯುತವಾದ ಪಾತ್ರವನ್ನು ವಹಿಸುತ್ತಿವೆ. ಸಂವಹನ ಮಾಧ್ಯಮಗಳಾದ ಸಾಮಾಜಿಕ ಮಾಧ್ಯಮಗಳು ಹಲವು ಭಾಷೆ ಮತ್ತು ಉಪಭಾಷೆಗಳಿಗೆ ಹೊಸ ಜೀವ ನೀಡುವಲ್ಲಿ ಶಕ್ತವಾಗಿದೆ. ಇತ್ತೀಚಿನ ದಿನಗಳಲ್ಲಿ ಸುಮಾರು ಶೇಕಡಾ 98 ರಷ್ಟು ವ್ಯಕ್ತಿಗಳ ಬಳಿ ಆಂಡ್ರಾಯ್ಡ್ ಸ್ಮಾರ್ಟ್ ಫೋನ್‌ಗಳಿವೆ. ಒಂದು ಪ್ರದೇಶದ ಜನರಲ್ಲಿ ಹೆಚ್ಚಿನವರಲ್ಲಿ ಲ್ಯಾಪ್‌ಟಾಪ್‌ಗಳಿವೆ. ಇವುಗಳ ಮೂಲಕ ವ್ಯಕ್ತಿ ತನಗೆ ತಿಳಿದ ವಿಷಯಗಳನ್ನು ತನ್ನ ಭಾಷೆಯಲ್ಲಿಯೇ ಹಂಚುತ್ತಿದ್ದಾನೆ. ಇವುಗಳನ್ನು ಗಮನದಲ್ಲಿಟ್ಟುಕೊಂಡು ಕನ್ನಡದ ಉಪಭಾಷೆಗಳಾದ ಕರಾವಳಿ ಕನ್ನಡ, ಅರೆಭಾಷೆ ಮತ್ತು ಹವ್ಯಕ ಭಾಷೆಗಳ ಬೆಳವಣಿಗೆಯನ್ನು ಇಲ್ಲಿ ಗಮನಿಸಲಾಗಿದೆ. ಈ ಭಾಷೆಗಳಿಗೆ ಪ್ರತ್ಯೇಕ ಲಿಪಿ ಇಲ್ಲ. ಶಿಷ್ಟ ಕನ್ನಡದ ಉಪಭಾಷೆಯಾದ ಇವು ಅದೇ ಲಿಪಿಯನ್ನು ಬಳಸುತ್ತಿವೆ. ಮೂಲ ಸ್ಥಳದಿಂದ ಉದ್ಯೋಗ ನಿಮಿತ್ತ ನಗರಗಳಿಗೆ ಹೋಗಿ ವಾಸಿಸುತ್ತಿರುವ ಯುವಜನಾಂಗ ತಮ್ಮ ಭಾಷೆಗಳನ್ನು ಕೌಟುಂಬಿಕ ವಲಯದಿಂದ ಹೊರಗೆ ಮಾತನಾಡಲು ನಾಚಿಕೊಳ್ಳುತ್ತಿದ್ದರು ಹಾಗೂ ತಮ್ಮ

ಮನೆಯಲ್ಲಿ ಆ ಭಾಷೆಗಳ ಬದಲಿಗೆ ಶಿಷ್ಟ ಕನ್ನಡವನ್ನೇ ಬಳಸುವುದಾಗಿ ಹೇಳಿಕೊಳ್ಳುತ್ತಿದ್ದರು. ಅಲ್ಲದೆ ಆ ಭಾಷೆಯನ್ನಾಡುವ ಪ್ರದೇಶದಲ್ಲಿ ಇತರ ಭಾಷೆಗಳು ಬಲಿಷ್ಠವಾಗಿ ಬೇರೂರಿದ್ದಾಗ ಈ ಭಾಷೆಗಳು ಕೇವಲ ಮನೆಯ ಒಳಗಡೆಗೆ ಮಾತ್ರ ಸೀಮಿತವಾಗಿಬಿಡುವ ಸಂಭವಗಳೂ ಎದುರಾಗಿದ್ದವು. ಯಾವಾಗ ಸಾಮಾಜಿಕ ಮಾಧ್ಯಮಗಳು ತಮ್ಮ ಮಾಹಿತಿಗಳನ್ನು ಹಂಚಿಕೊಳ್ಳಲು ಮುಕ್ತ ಅವಕಾಶ ನೀಡಿತೋ ಭಾಷಾಭಿಮಾನಿಗಳು ತಮ್ಮ ತಮ್ಮ ಭಾಷೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಭಾಷೆಯ ಬಗ್ಗೆ ಮಾಹಿತಿ ಹಂಚಿಕೊಂಡರು. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ದೊರೆತಾಗ ಇದು ನಂತರ ಟ್ರೆಂಡ್ ಆಗಿ ಮಾರ್ಪಾಡಾಯಿತು. ಇವೇ ಭಾಷಿಕರಲ್ಲದೆ ಇತರರೂ ಇದಕ್ಕೆ ಸ್ಪಂದಿಸಿದರು. ಈ ನಿಟ್ಟಿನಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಮಂಗಳೂರು ಕನ್ನಡ, ಹವ್ಯಕ ಮತ್ತು ಅರೆಭಾಷಿಕರು ತಮ್ಮ ಸಂಸ್ಕೃತಿಯನ್ನು ಬಿತ್ತುವ ಮೂಲಕ ತಮ್ಮ ಭಾಷೆಯ ಸಂರಕ್ಷಣೆ ಮತ್ತು ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿರುವುದನ್ನು ಕಾಣಬಹುದು.

**ಸಾಮಾಜಿಕ ಮಾಧ್ಯಮದಲ್ಲಿ ಹವ್ಯಕ ಭಾಷೆ:**

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳು ಹವ್ಯಕ ಕನ್ನಡದ ಪುನರುತ್ಥಾನಕ್ಕೆ ಮತ್ತು ಪ್ರಚಾರಕ್ಕೆ ದೊಡ್ಡ ವೇದಿಕೆಯಾಗಿವೆ. ಈ ಮೊದಲು ಕೇವಲ ಆ ಭಾಷಾ ಸಮುದಾಯದ ಮನೆಮಾತಾಗಿದ್ದ ಈ ಭಾಷೆ ಇಂದು ಡಿಜಿಟಲ್ ಜಗತ್ತಿನಲ್ಲಿ ತನ್ನದೇ ಆದ ಛಾಪು ಮೂಡಿಸಿದೆ.

ಇನ್‌ಸ್ಟಾಗ್ರಾಮ್‌ನಲ್ಲಿ: ಇಂದು ಸಾಮಾಜಿಕ ಮಾಧ್ಯಮದಲ್ಲಿ ಅತಿ ಹೆಚ್ಚು ವೀಕ್ಷಣೆಗೆ ಒಳಗಾಗುತ್ತಿರುವುದು ಕಾಮಿಡಿ ರೀಲ್ಸ್‌ಗಳು ಅಥವಾ ಕಿರು ವೀಡಿಯೋಗಳು. ಹವ್ಯಕ ಭಾಷೆಯ ವಿಶಿಷ್ಟ ಉಚ್ಚಾರಣೆ ಮತ್ತು ಧ್ವನಿ ಬದಲಾವಣೆ ಹಾಸ್ಯಕ್ಕೆ ತುಂಬಾ ಪೂರಕವಾಗಿದೆ. ರೀಲ್ಸ್‌ಗಳಿಂದ ಪ್ರಭಾವಿತರಾದ ಹವ್ಯಕ ಭಾಷಿಕ ಅನೇಕ ಯುವ ಪ್ರತಿಭೆಗಳು ಇನ್‌ಸ್ಟಾಗ್ರಾಮ್‌ನಲ್ಲಿ ತಮ್ಮ ಭಾಷೆಯಲ್ಲೇ ಕಾಮಿಡಿ ರೀಲ್ಸ್ ಮಾಡುತ್ತಿದ್ದಾರೆ. ಉದಾಹರಣೆಗೆ ಪೂರ್ಣಪ್ರಜ್ಞಾ ಬಳ್ಳಮೂಲೆ ಅವರು ಹವ್ಯಕ ಭಾಷೆಯಲ್ಲಿ ರೀಲ್ಸ್ ಮಾಡುತ್ತಾರೆ. ಹವ್ಯಕ ಸಮುದಾಯದ ದೈನಂದಿನ ಜೀವನ, ಆಚರಣೆಗಳು ಮತ್ತು ಹಾಸ್ಯಮಯ ಸಂಭಾಷಣೆಗಳು ಇವರ ರೀಲ್ಸ್‌ಗಳಲ್ಲಿ ಇರುತ್ತವೆ. ವಿಶೇಷವಾಗಿ 'ಹವ್ಯಕ ಅಮ್ಮ' ಮತ್ತು 'ಹವ್ಯಕ ಮನೆಮಗ' ಪಾತ್ರಗಳು ಹೆಚ್ಚು ಜನಪ್ರಿಯವಾಗಿವೆ. ಶ್ರೇಯಾ ಶರ್ಮ ಅವರು ಹವ್ಯಕ ಭಾಷೆ ಮತ್ತು ಮಲೆನಾಡಿನ ಜೀವನಶೈಲಿಯನ್ನು ತಮ್ಮ ಭಾಷೆಯಲ್ಲಿ ರೀಲ್ಸ್ ಮಾಡಿದ್ದಾರೆ. ಹವ್ಯಕ ಬಾಯ್ಸ್ ಎಂಬ ಹೆಸರಿನಲ್ಲಿ ತಂಡವು ಹವ್ಯಕ ಭಾಷೆಯ ಹಾಸ್ಯಮಯ ಕಿರು ನಾಟಕಗಳನ್ನು ರೀಲ್ಸ್ ರೂಪದಲ್ಲಿ ನೀಡಿದ್ದಾರೆ. ಕಾಲೇಜು ಜೀವನ ಅಥವಾ ಮದುವೆ ಸಮಾರಂಭಗಳಲ್ಲಿ ಹವ್ಯಕ ಭಾಷಿಕರ ನಡುವೆ ನಡೆಯುವ ತಮಾಷೆಯ ಸಂಭಾಷಣೆಗಳು ಇವರ ವೀಡಿಯೋಗಳ ಜೀವಾಳವಾಗಿದೆ. ಅಂತೆಯೇ ಅಕ್ಷತಾ ಭಟ್ ಅವರು ಹವ್ಯಕ ಹುಡುಗಿಯರ ಸ್ವಭಾವದ ಬಗ್ಗೆ, ಸವಿತಾ ಹೆಗಡೆ ಅವರು ಹವ್ಯಕ ಕಿಚನ್ ಶೀರ್ಷಿಕೆಯಲ್ಲಿ ಅಡುಗೆಗೆ ಸಂಬಂಧಿಸಿದ ರೀಲ್ಸ್‌ಗಳಲ್ಲಿ

ಬಹಳ ಪ್ರಸಿದ್ಧರು. ಹವ್ಯಕ ಪದಗಳಾದ 'ತಂಬುಳಿ'[1], 'ಅಪ್ಪೆಹುಳಿ'[2] ಮುಂತಾದವನ್ನು ಪ್ರಚಾರ ಮಾಡುವಲ್ಲಿ ಇವರ ಪಾತ್ರ ಹಿರಿದು. ಇನ್‌ಸ್ಟಾಗ್ರಾಮ್‌ನಲ್ಲಿ #ಹವ್ಯಕ, #ಹವ್ಯಕಕನ್ನಡ, #ಮಲ್ನಾಡ್_ಹವ್ಯಕ, #ಸಿರಸಿ_ಸಿದ್ದಾಪುರ_ಹವ್ಯಕ ಮುಂತಾದ ಹ್ಯಾಶ್‌ಟ್ಯಾಗ್‌ಗಳ ಮೂಲಕ ಹವ್ಯಕ ಭಾಷೆಯ ಸೊಗಡನ್ನು ನಾವು ಪಡೆದುಕೊಳ್ಳಬಹುದು.

ಫೇಸ್‌ಬುಕ್ ಪೇಜ್‌ಗಳಲ್ಲಿ: 'ಹವ್ಯಕ ಲೋಕ' ಪುಟವು ಹವ್ಯಕ ಭಾಷೆಯ ಗಾದೆಗಳು, ಹಬ್ಬಗಳ ಮಾಹಿತಿ ಮತ್ತು ಸಮುದಾಯದ ಸಾಧಕರ ಮಾಹಿತಿ ಒಳಗೊಂಡಿದೆ. 'ಹವ್ಯಕ ಹಾಸ್ಯ' ಪುಟವು ವಿಶಿಷ್ಟ ಶೈಲಿಯ ಹಾಸ್ಯದ ತುಣುಕುಗಳು, 'ಸಿರ್ಸಿ–ಸಿದ್ದಾಪುರ ಹವ್ಯಕರು' ಪುಟವು ಉತ್ತರ ಕನ್ನಡ ಭಾಗದ ಹವ್ಯಕ ಸಂಸ್ಕೃತಿ ಮತ್ತು ಆ ಭಾಗದ ಸೊಗಡನ್ನು ಹೊಂದಿದೆ. 'ಹವ್ಯಕ ಕಿಚನ್' ತನ್ನ ಪೇಜ್‌ನಲ್ಲಿ ವಿಶಿಷ್ಟ ಹವ್ಯಕ ಅಡುಗೆಗಳನ್ನು ಹೊಂದಿವೆ. ಇವುಗಳೊಂದಿಗೆ ಗ್ರೂಪ್‌ಗಳೂ ಇವೆ. ಇವುಗಳಲ್ಲಿ ಇತರ ಭಾಷಿಕರು ಕೂಡ ಹವ್ಯಕ ಭಾಷೆಯಲ್ಲಿ ಸಂವಹನ ನಡೆಸಬಹುದು, ಪೋಸ್ಟ್ ಮಾಡಬಹುದು. ಅವುಗಳಲ್ಲಿ 'ಹವ್ಯಕ ಸಮಾಜ' ಗ್ರೂಪ್ ಮದುವೆ, ಧಾರ್ಮಿಕ ಕಾರ್ಯಕ್ರಮಗಳ ಬಗ್ಗೆ, 'ಹವ್ಯಕ ಸಾಹಿತ್ಯ ಸಂಘ' ಗ್ರೂಪ್ ಹವ್ಯಕ ಭಾಷೆಯಲ್ಲಿ ಕಥೆ, ಕವನ ಮತ್ತು ಲೇಖನ ಬರೆಯುವವರಿಗಾಗಿ, 'ಹವ್ಯಕ ಹರಟೆ' ಎಂಬ ಪುಟದಲ್ಲಿ ಭಾಷೆಯ ಬಗ್ಗೆ ತಮಾಷೆ ಚರ್ಚೆಗಳನ್ನು ಹಂಚಿಕೊಳ್ಳಬಹುದಾಗಿದೆ. ಇವೇ ಅಲ್ಲದೆ, ಹವ್ಯಕ ಸಂಪ್ರದಾಯದ ಅಡುಗೆಗಳು, ಹಸೆ ಚಿತ್ತಾರ ಮತ್ತು ಮಲೆನಾಡಿನ ಜೀವನಶೈಲಿಯನ್ನು ಈ ಭಾಷೆಯಲ್ಲೇ ವಿವರಿಸುವ ವ್ಲಾಗ್‌ಗಳು ಇಲ್ಲಿ ಬಹಳ ಜನಪ್ರಿಯವಾಗಿವೆ.

ಯೂಟ್ಯೂಬಿನಲ್ಲಿಯೂ ಹವ್ಯಕ ಭಾಷೆಯ ಸೊಗಡು, ಅದರ ವೈಶಿಷ್ಟ್ಯ ಮತ್ತು ಅಸ್ಮಿತೆಯನ್ನು ಬಿಂಬಿಸುವ ಹಲವಾರು ವೀಡಿಯೋಗಳು ಲಭ್ಯವಿದೆ. ಹವ್ಯಕ ಭಾಷೆಯ ವಿಶಿಷ್ಟ ಶೈಲಿಯನ್ನು ಹಾಸ್ಯದ ಮೂಲಕ ಪ್ರಸ್ತುತಪಡಿಸುವ ವೀಡಿಯೊಗಳಿವೆ, ಅನೇಕ ಹವ್ಯಕ ಕುಟುಂಬಗಳು ತಮ್ಮ ದೈನಂದಿನ ಜೀವನ, ಹಬ್ಬಗಳು ಮತ್ತು ಸಂಪ್ರದಾಯಗಳನ್ನು ಹವ್ಯಕ ಭಾಷೆಯಲ್ಲೇ ವ್ಲಾಗ್ ಮೂಲಕ ಹಂಚಿಕೊಳ್ಳುತ್ತಿದ್ದಾರೆ. ಹವ್ಯಕ ಭಾಷೆಯ ಜಾನಪದ ಹಾಡುಗಳು, ಕಾಮಿಡಿ ಹಾಡುಗಳು ಮತ್ತು ಯಕ್ಷಗಾನಕ್ಕೆ ಸಂಬಂಧಿಸಿದ ವೀಡಿಯೊಗಳು ಇವು ಭಾಷೆಯ ಅಸ್ಮಿತೆಯನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಅವುಗಳಲ್ಲಿ ಪ್ರಮುಖವಾಗಿ ಹವ್ಯಕ VS ಉತ್ತರ ಕರ್ನಾಟಕ ಹಾಸ್ಯ, ಹವ್ಯಕ ಕಾಮಿಡಿ ಹಾಡು ಚಾನೆಲ್‌ನಲ್ಲಿ ವಸುಮತಿ ಭಟ್ ಹಾಗೂ ನಾಗರತ್ನ ಭಟ್ ಅವರ ಹಾಡು, ಹವ್ಯಕ ಕನ್ನಡ ಕನ್‌ವರ್‌ಸೇಶನ್ ವಿತ್ ನೇಬರ್ಸ್ ಚಾನೆಲ್‌ನಲ್ಲಿ ಶ್ರೀವಾಣಿ ಭಟ್ ಅವರ ವೀಡಿಯೋಗಳು ಹಾಗೂ ಮಂಗಳೂರು VS ಸಾಗರ ಹವ್ಯಕ ಹಾಸ್ಯ ಚಾನೆಲ್‌ನಲ್ಲಿ ಚೇತನಾ ಭಟ್ ಅವರು ಹವ್ಯಕ ಶಬ್ದಗಳ ಬಳಕೆ ಮತ್ತು ಅರ್ಥವನ್ನು ಹಾಸ್ಯ ವೀಡಿಯೋಗಳಲ್ಲಿ ತಿಳಿಸುತ್ತಾರೆ. ಹೀಗೆ ಇತ್ಯಾದಿ ವೀಡಿಯೋಗಳು ಹವ್ಯಕ ಭಾಷೆಯ ಉಚ್ಚಾರಣೆ ಮತ್ತು ಬಳಕೆಯನ್ನು ತಿಳಿದುಕೊಳ್ಳಲು ಸಹಾಯಕವಾಗಿವೆ.

**ಸಾಮಾಜಿಕ ಮಾಧ್ಯಮದಲ್ಲಿ ಅರೆಭಾಷೆ:**

ಸಾಮಾಜಿಕ ಮಾಧ್ಯಮದಲ್ಲಿ ಅರೆಭಾಷೆ ಇತ್ತೀಚಿನ ವರ್ಷಗಳಲ್ಲಿ ಬಹಳ ದೊಡ್ಡ ಮಟ್ಟದ ಕ್ರಾಂತಿಯನ್ನೇ ಮಾಡಿದೆ. ಒಂದು ಕಾಲದಲ್ಲಿ ಸುಳ್ಯ ಮತ್ತು ಕೊಡಗಿನ ಹಳ್ಳಿಗಳಿಗೆ ಮಾತ್ರ ಸೀಮಿತವಾಗಿದ್ದ ಈ ಭಾಷೆ, ಇಂದು ಇನ್‌ಸ್ಟಾಗ್ರಾಮ್ ರೀಲ್ಸ್ ಮತ್ತು ಯೂಟ್ಯೂಬ್ ಮೂಲಕ ಜಗತ್ತಿನಾದ್ಯಂತ ಇರುವ ಕನ್ನಡಿಗರನ್ನು ತಲುಪುತ್ತಿದೆ.

**ಇನ್‌ಸ್ಟಾಗ್ರಾಮ್‌ನಲ್ಲಿ:** ಸುಳ್ಯ ಮತ್ತು ಕೊಡಗಿನ ಯುವ ಕ್ರಿಯೇಟರ್‌ಗಳು ಅರೆಭಾಷೆಯ ವಿಶಿಷ್ಟ ಉಚ್ಚಾರಣೆಯನ್ನು ಬಳಸಿ ಮಾಡುವ ಹಾಸ್ಯಮಯ ವೀಡಿಯೋಗಳು ಭಾರೀ ವೈರಲ್ ಆಗುತ್ತಿವೆ. ಈ ಮೂಲಕ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಅರೆಭಾಷೆಯ ಸೊಗಡನ್ನು ಜಗತ್ತಿಗೆ ಪರಿಚಯಿಸುತ್ತಿದ್ದಾರೆ. ಇಲ್ಲಿ ಕೆಲವು ಪ್ರಮುಖ ಖಾತೆಗಳನ್ನು ಗಮನಿಸಬಹುದು. ತೇಜಸ್ವಿ ಸುಳ್ಯ ಅವರು ಅರೆಭಾಷೆಯಲ್ಲಿ ಹಾಸ್ಯಮಯ ವಿಡಿಯೋಗಳನ್ನು ಮತ್ತು ದೈನಂದಿನ ಜೀವನದ ಘಟನೆಗಳನ್ನು ಸುಳ್ಯ ಅರೆಭಾಷೆಯ ಸೊಗಡಿನಲ್ಲಿ ಹಂಚಿಕೊಳ್ಳುತ್ತಿದ್ದಾರೆ. @ವಿನೀತ್_ಕುಮಾರ್_ವಿ_ವಿ (ಮಧ್ಯಮ ವರ್ಗದ ಕುಟುಂಬ) – ಇವರು ಅರೆಭಾಷೆಯ ಅಸ್ಮಿತೆಯನ್ನು ಸಾಮಾಜಿಕ ಮಾಧ್ಯಮದಲ್ಲಿ ದೊಡ್ಡ ಮಟ್ಟಕ್ಕೆ ತಲುಪಿಸಿದ ಕ್ರಿಯೇಟರ್. ಇವರ ಮಧ್ಯಮ ವರ್ಗದ ಕುಟುಂಬ ಸರಣಿಯ ರೀಲ್ಸ್‌ನಲ್ಲಿ ಅರೆಭಾಷೆಯ ಸಂಭಾಷಣೆಗಳು ಬಹಳ ನೈಜವಾಗಿ ಮತ್ತು ಹಾಸ್ಯಮಯವಾಗಿರುತ್ತವೆ. @ದಿ_ಸುಳ್ಯ_ವ್ಲಾಗ್‌ನಲ್ಲಿ ಸುಳ್ಯ ಮತ್ತು ಪುತ್ತೂರು ಭಾಗದ ಯುವಕರು ತಮ್ಮ ದೈನಂದಿನ ಕೃಷಿ ಬದುಕು ಮತ್ತು ಅಡಿಕೆ ತೋಟದ ಜೀವನವನ್ನು ಅರೆಭಾಷೆಯಲ್ಲೇ ವಿವರಿಸುತ್ತಾರೆ. @ಶ್ರವಣ್_ಪಿ_ವಿ – ಕೊಡಗಿನ ಭಾಗದ ಅರೆಭಾಷೆ ಮತ್ತು ಸಂಸ್ಕೃತಿಯನ್ನು ತಮ್ಮ ವೀಡಿಯೋಗಳ ಮೂಲಕ ಹಂಚಿಕೊಳ್ಳುತ್ತಿದ್ದಾರೆ. ಚಂದನ್ ಸುಳ್ಯ, ರೂಪಾ ಡಿ. ಸುಳ್ಯ, ಧನುಶ್ ಗೌಡ ಇವರು ಅರೆಭಾಷೆ ರೀಲ್ಸ್ ವಿಭಾಗದಲ್ಲಿ ಪ್ರಸಿದ್ಧರು. ಕೊಡಗು/ಸುಳ್ಯ ಇನ್‌ಫ್ಲೂಯೆನ್ಸ್, ಇದರಲ್ಲಿ ಕೊಡಗು ಮತ್ತು ಸುಳ್ಯದ ಅನೇಕ ಸ್ಥಳೀಯ ಪ್ರತಿಭೆಗಳು ತಮ್ಮ ದೈನಂದಿನ ವ್ಲಾಗ್ಸ್ ಹಾಗೂ ಕಾಮಿಡಿ ಸ್ಕಿಟ್‌ಗಳಲ್ಲಿ ಅರೆಭಾಷೆಯನ್ನೇ ಬಳಸುತ್ತಿದ್ದಾರೆ. ಅಂತೆಯೇ @ಅರೆಭಾಷೆ_ಟ್ರೋಲ್ಸ್, @ಟ್ರೋಲ್_ಸುಳ್ಯ_ಅಫೀಷಿಯಲ್, @ಕೊಡಗು_ಟ್ರೋಲ್ಸ್ ಎಂಬ ಟ್ರೋಲ್ ಪುಟಗಳು ಅರೆಭಾಷೆ ಶೈಲಿಯ ಹಾಸ್ಯಗಳು, ನಿರ್ದಿಷ್ಟ ಪದಗಳ ಬಳಸಿ ಮಾಡುವ ಟ್ರೋಲ್‌ಗಳು ಪ್ರಸಿದ್ಧವಾಗಿವೆ. @ಅರೆಭಾಷೆ_ಅಕಾಡೆಮಿ – ಇದು ಕರ್ನಾಟಕ ಅರೆಭಾಷೆ ಅಕಾಡೆಮಿಯ ಅಧಿಕೃತ ಇನ್‌ಸ್ಟಾಗ್ರಾಮ್ ಪುಟ. ಇಲ್ಲಿ ಅರೆಭಾಷೆಯ ಸಾಹಿತ್ಯ, ಹಬ್ಬಗಳು ಮತ್ತು ಸಾಂಪ್ರದಾಯಿಕ ಆಚರಣೆಗಳ ಬಗ್ಗೆ ಮಾಹಿತಿ ಸಿಗುತ್ತದೆ. @ನಮ್ಮ_ಅರೆಭಾಷೆ – ಈ ಪುಟವು ಅರೆಭಾಷೆಯ ವಿಶಿಷ್ಟ ಪದಗಳು ಮತ್ತು ಅದರ ಅರ್ಥವನ್ನು ಹಂಚಿಕೊಳ್ಳುವ ಮೂಲಕ ಭಾಷಾ ಕಲಿಕೆಗೆ ಸಹಕಾರಿಯಾಗಿದೆ. #ಅರೆಭಾಷೆ, #ಅರೆಭಾಷೆ ರೀಲ್ಸ್, #ಸುಳ್ಯ, #ಕೊಡಗು, #ಅರೆಭಾಷೆ ಕಾಮಿಡಿ ಇತ್ಯಾದಿ ಹ್ಯಾಶ್‌ಟ್ಯಾಗ್‌ಗಳನ್ನು ಹುಡುಕಿದರೆ ನೂರಾರು ಅರೆಭಾಷೆ ರೀಲ್ಸ್‌ಗಳು ಸಿಗುತ್ತವೆ. ಇವುಗಳಲ್ಲೆಲ್ಲಾ ಹೆಚ್ಚಾಗಿ ಅರೆಭಾಷೆಯ ವಿಶಿಷ್ಟ ಶೈಲಿಯ ಸಂಭಾಷಣೆಗಳನ್ನು ಬಳಸಿ ಹಾಸ್ಯ ವಿಡಿಯೋಗಳು, ಹಬ್ಬ

ಹರಿದಿನಗಳು, ಮದುವೆ ಸಮಾರಂಭಗಳಲ್ಲಿ ಬಳಸುವ ಅರೆಭಾಷೆ ಹಾಡುಗಳು ಮತ್ತು ಆಚರಣೆಗಳ ಕಿರು ವಿಡಿಯೋಗಳ ಮೂಲಕ ಯುವ ಪೀಳಿಗೆಗೆ ತಮ್ಮ ಭಾಷೆಯ ಮೇಲೆ ಅಭಿಮಾನ ಮೂಡುವಂತೆ ಇವರು ಪ್ರೇರೇಪಿಸುತ್ತಿದ್ದಾರೆ.

ಫೇಸ್‌ಬುಕ್‌ನಲ್ಲಿ ಅರೆಭಾಷೆ ಗೌಡ ಸಮುದಾಯದವರು ಮತ್ತು ಆ ಭಾಷಾ ಪ್ರೇಮಿಗಳು ಅನೇಕ ಗ್ರೂಪ್‌ಗಳನ್ನು ಹೊಂದಿದ್ದಾರೆ. 'ನಮ್ಮ ಅರೆಭಾಷೆ ಅಥವಾ ಅರೆಭಾಷೆ ಸಂಸ್ಕೃತಿ' ಪುಟಗಳು ಭಾಷೆಯ ಅಸ್ಮಿತೆಯನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಇಲ್ಲಿ ಭಾಷೆಯ ಉಳಿವಿಗಾಗಿ ಕವನಗಳು, ಗಾದೆ ಮಾತುಗಳು ಮತ್ತು ಮೂಲದ ಪದಗಳ ಅರ್ಥವನ್ನು ಹಂಚಿಕೊಳ್ಳಲಾಗುತ್ತಿದೆ. ಇಲ್ಲಿನ ಗ್ರೂಪ್‌ಗಳಲ್ಲಿ ಜನರು ತಮ್ಮ ನಡುವೆ ಅರೆಭಾಷೆಯಲ್ಲೇ ಸಂವಹನ ನಡೆಸುತ್ತಾರೆ. ಅರೆಭಾಷೆ ಸಿರಿ, ಕೊಡಗು ಗೌಡ ಕಮ್ಯೂನಿಟಿ ಗ್ರೂಪ್ಸ್, ಸುಳ್ಯ_ವಾರ್ತೆ ಇತ್ಯಾದಿ ಗ್ರೂಪ್‌ಗಳಲ್ಲಿ ಅರೆಭಾಷಿಕ ಸಮುದಾಯದ ಆಚಾರ ವಿಚಾರಗಳ ಬಗ್ಗೆ ಅರೆಭಾಷೆಯಲ್ಲೇ ವ್ಯವಹರಿಸಲಾಗುತ್ತದೆ. ಲಕ್ಷ್ಮೀ ನಾರಾಯಣ ಕಜೆಗದ್ದೆ ಅರೆಭಾಷೆಯ ಸಾಹಿತ್ಯ ಮತ್ತು ಆಚರಣೆಗಳ ಆಳವಾದ ಜ್ಞಾನವನ್ನು ಹೊಂದಿದ್ದು, ಫೇಸ್‌ಬುಕ್‌ನಲ್ಲಿ ಇವರು ಹಂಚಿಕೊಳ್ಳುವ ವಿವರಗಳು ಭಾಷಾ ಆಸಕ್ತರಿಗೆ ಉಪಯುಕ್ತವಾದವು.

ಯೂಟ್ಯೂಬ್‌ನಲ್ಲಿ ಅರೆಭಾಷೆಯ ಸೊಗಡು ಮತ್ತು ಸಂಸ್ಕೃತಿಯನ್ನು ಜಗತ್ತಿಗೆ ಸಾರುತ್ತಿರುವ ಅನೇಕ ಚಾನೆಲ್‌ಗಳಿವೆ. ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ[3] – ಈ ಚಾನೆಲ್ ಕರ್ನಾಟಕ ಸರ್ಕಾರದ ಅಧಿಕೃತ ಚಾನೆಲ್, ಅರೆಭಾಷೆಯ ಇತಿಹಾಸ, ಕವಿಗೋಷ್ಠಿ ಮತ್ತು ಸಂಶೋಧನಾತ್ಮಕ ವಿಷಯಗಳನ್ನು ತಿಳಿಸುವ ಉತ್ತಮವಾದ ವೇದಿಕೆ. 'ಅರೆಭಾಷೆ ಗೌಡ ಲೆಗಸಿ' ಸಾಂಪ್ರದಾಯಿಕ ಉಡುಗೆ ತೊಡುಗೆ ಮತ್ತು ಪದ್ಧತಿಗಳ ಬಗ್ಗೆ ಮಾಹಿತಿ ನೀಡುವ ಚಾನೆಲ್, 'ಅರೆಭಾಷೆ ಸಂಗಮ' ಇದು ಕೊಡಗು ಗೌಡರ ಮೊದಲ ಆನ್‌ಲೈನ್ ಚಾನೆಲ್ ಎಂದು ಗುರುತಿಸಿಕೊಂಡಿದ್ದು, ಸಮುದಾಯದ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಕೆಲಸ ಮಾಡುತ್ತಿದೆ. ಇವುಗಳಲ್ಲದೆ ಜನಪ್ರಿಯ ತ್ರಿಶೂಲ್ ಶೊ, ಅರೆಭಾಷೆಯ ಕಾಮಿಡಿ ಸರಣಿಗಳು, 'ಇಬ್ಬನಿ ಮೀಡಿಯಾ' ಕೌಟುಂಬಿಕ ಸೆಂಟಿಮೆಂಟ್ ಮತ್ತು ಹಾಸ್ಯ ಕಿರುಚಿತ್ರಗಳನ್ನು, 'ಐನ್ ಮನೆ ಫಿಲ್ಮ್ಸ್'ನಲ್ಲಿ ಅರೆಭಾಷೆ ಸಸ್ಪೆನ್ಸ್ ಥ್ರಿಲ್ಲರ್ ಕಿರುಚಿತ್ರಗಳು, 'ಅರೆಭಾಷೆ ಟ್ರಾವೆಲರ್': ಪ್ರವಾಸದೊಂದಿಗೆ ಅರೆಭಾಷೆಯಲ್ಲಿ ಮಾಹಿತಿ ಹಂಚಿಕೆ. ಹೀಗೆ ಅರೆಭಾಷೆಯು ಸಾಮಾಜಿಕ ಮಾಧ್ಯಮದ ಮೂಲಕ ತನ್ನ ಅಸ್ಮಿತೆಯನ್ನು ಕಂಡುಕೊಂಡಿದೆ. ಯೂಟ್ಯೂಬ್‌ನಲ್ಲಿ ಅರೆಭಾಷೆ ಕಾಮಿಡಿ, ಅರೆಭಾಷೆ ಶಾರ್ಟ್ ಫಿಲಮ್ಸ್, ಸುಳ್ಯ ಅರೆಭಾಷೆ, ಕೊಡಗು ಅರೆಭಾಷೆ ಕೀವರ್ಡ್‌ಗಳನ್ನು ಬಳಸಿ ಹುಡುಕಬಹುದು.

**ಸಾಮಾಜಿಕ ಮಾಧ್ಯಮದಲ್ಲಿ ಮಂಗಳೂರು ಕನ್ನಡ:**

ಮಂಗಳೂರು ಕನ್ನಡವು ತನ್ನದೇ ಆದ ವಿಶಿಷ್ಟ ಸೊಗಡು ಮತ್ತು ಮಾಧುರ್ಯಕ್ಕೆ ಹೆಸರುವಾಸಿಯಾಗಿದೆ. ಇದು ಕರಾವಳಿ ಕನ್ನಡಕ್ಕೆ ಸೇರುತ್ತದೆ. ಸಾಮಾಜಿಕ ಮಾಧ್ಯಮಗಳು ಮಂಗಳೂರು ಕನ್ನಡದ ಅಸ್ಮಿತೆಯನ್ನು ಜಾಗತಿಕ ಮಟ್ಟಿಗೆ

ಕೊಂಡೊಯ್ಯುವಲ್ಲಿ ಬಹಳ ದೊಡ್ಡ ಪಾತ್ರ ವಹಿಸುತ್ತಿವೆ. ಒಂದು ಕಾಲದಲ್ಲಿ ಕೇವಲ ಕರಾವಳಿಗೆ ಸೀಮಿತವಾಗಿದ್ದ ಭಾಷೆಯ ಸೊಗಡು ಇಂದು ಇಂಟರ್ನೆಟ್ ಮೂಲಕ ಎಲ್ಲೆಡೆ ಪಸರಿಸಿದೆ. ತುಳು ಪ್ರಭಾವ ಹೊಂದಿದ ಶೈಲಿ ಮತ್ತು ವಿಶಿಷ್ಟ ಪದಬಳಕೆಗಳು ರೀಲ್ಸ್ ಜಗತ್ತಿನಲ್ಲಿ ದೊಡ್ಡ ಮಟ್ಟದ ಅಭಿಮಾನಿಗಳನ್ನು ಹೊಂದಿದೆ.

ಇನ್‌ಸ್ಟಾಗ್ರಾಮ್ನಲ್ಲಿ ಮಂಗಳೂರು ಕನ್ನಡ ಜನಪ್ರಿಯವಾಗಿದೆ. ಇಲ್ಲಿನ ಪ್ರಮುಖ ಕಂಟೆಂಟ್ ಕ್ರಿಯೇಟರ್‌ಗಳು[4], ಅರ್ಪಿತ್ ಇಂದ್ರವರ್ಧನ್– ತಮ್ಮ ವಿಶಿಷ್ಟ ಮಂಗಳೂರು ಶೈಲಿಯ ಹಾಸ್ಯ ಮತ್ತು ನಿರೂಪಣೆಗೆ ಪ್ರಸಿದ್ಧರು. ವಿಕಾಸ್ ಶೆಟ್ಟಿ– ಕರಾವಳಿ ಭಾಗದ ಸಂಸ್ಕೃತಿ ಮತ್ತು ಭಾಷೆಯನ್ನು ಹಾಸ್ಯದ ಮೂಲಕ ಜನಪ್ರಿಯಗೊಳಿಸುತ್ತಿದ್ದಾರೆ. ಶಾರದಾ (@ಅಯ್ಯೋ ಶ್ರದ್ಧಾ) ಇವರ ವೀಡಿಯೋಗಳು ಹೆಸರು ಪಡೆದಿವೆ ಇವರು ಮೂಲ ಮಂಗಳೂರು ಕನ್ನಡದ ಶೈಲಿಗೆ ಪ್ರಸಿದ್ಧರು. ಕೋಸ್ಟಲ್ ಕ್ರಿಯೇಟರ್ಸ್– ಮಂಗಳೂರು ಶೈಲಿಯ ಲಘು ಧಾಟಿಯ ಹಾಸ್ಯಗಳನ್ನು ಇಲ್ಲಿ ಮಾಡುತ್ತಾರೆ. ಇನ್ಸ್‌ಸ್ಟಾಗ್ರಾಮ್‌ನಲ್ಲಿ #ಮಂಗಳೂರು ಕನ್ನಡ, #ಕುಡ್ಲ, #ಕೋಸ್ಟಲ್‌ಕರ್ನಾಟಕ, #ತುಳುನಾಡ್, #ಮಂಗಳೂರು ಇನ್‌ಫ್ಲೂಯೆನ್ಸರ್ಸ್ ಸರ್ಚ್ ಬಾರ್‌ನಲ್ಲಿ ಹುಡುಕಿದರೆ ಉತ್ತಮ ವಿಡಿಯೋಗಳನ್ನು ಕಾಣಬಹುದು. ಮಂಗಳೂರು ಕನ್ನಡವನ್ನು ಹಿಂದೆ ಕೇವಲ ಹಾಸ್ಯಕ್ಕಾಗಿ ಬಳಸಲಾಗುತ್ತಿತ್ತು. ಆದರೆ ಇಂದು ಇನ್‌ಸ್ಟಾಗ್ರಾಮ್‌ನಿಂದಾಗಿ ಜನರು ಈ ಭಾಷೆಯನ್ನು ಸ್ಟೈಲ್ ಸ್ಟೇಟ್‌ಮೆಂಟ್ ಎಂದು ನೋಡುತ್ತಿದ್ದಾರೆ. ವಿದೇಶದಲ್ಲಿರುವ ಮಂಗಳೂರಿಗರೂ ಈ ಭಾಷೆಯ ಮೂಲಕ ತಮ್ಮ ಮೂಲದೊಂದಿಗೆ ಸಂಪರ್ಕದಲ್ಲಿರಲು ಸಾಮಾಜಿಕ ಮಾಧ್ಯಮಗಳು ಸಹಕಾರಿಯಾಗಿವೆ.

ಫೇಸ್‌ಬುಕ್‌ನಲ್ಲಿ ಮಂಗಳೂರು ಕನ್ನಡ ಮತ್ತು ಕರಾವಳಿಯ ಸಂಸ್ಕೃತಿಗೆ ದಶಕಗಳಿಂದಲೂ ದೊಡ್ಡ ಅಭಿಮಾನಿ ಬಳಗವಿದೆ. ಇನ್ಸ್‌ಸ್ಟಾಗ್ರಾಮ್ ಕೇವಲ ವಿಡಿಯೋಗಳಿಗೆ ಸೀಮಿತವಾಗಿದ್ದರೆ, ಫೇಸ್‌ಬುಕ್‌ನಲ್ಲಿ ಮಂಗಳೂರು ಕನ್ನಡದ ಬರವಣಿಗೆ ಚರ್ಚೆ ಮತ್ತು ಸಮುದಾಯಗಳು ಬಹಳ ಸಕ್ರಿಯವಾಗಿವೆ. ಇಲ್ಲಿರುವ ಪ್ರಾದೇಶಿಕ ಪೇಜ್‌ಗಳಾದ ಮಂಗಳೂರು, ಉಡುಪಿ ಹಾಗೂ ಕುಂದಾಪುರದ ಹೆಸರಿನಲ್ಲಿರುವ ದೊಡ್ಡ ಪೇಜ್‌ಗಳು ಅಲ್ಲಿನ ಸ್ಥಳೀಯ ಭಾಷೆಯಲ್ಲಿ ಸುದ್ದಿಯನ್ನು ಮತ್ತು ಮೀಮ್‌ಗಳನ್ನು ಹಂಚಿಕೊಳ್ಳುತ್ತವೆ. ನೆನಪುಗಳ ಹಂಚಿಕೆ ಪುಟಗಳಲ್ಲಿ ಅಲ್ಲಿನ ವಿಶಿಷ್ಟ ಸಂಪ್ರದಾಯಗಳ ಬಗ್ಗೆ ಚರ್ಚೆ ನಡೆಯುತ್ತದೆ. ಆಗ ಜನರು ತಮ್ಮದೇ ಸೊಗಡಿನ ಮಂಗಳೂರು ಕನ್ನಡದಲ್ಲಿ ಪ್ರತಿಕ್ರಿಯಿಸುತ್ತಾರೆ. ಫೇಸ್‌ಬುಕ್‌ನಲ್ಲಿ 'ಮಂಗಳೂರ್ ಮೀಮ್ಸ್' – ಇದು ಅತ್ಯಂತ ಜನಪ್ರಿಯ ಪೇಜ್‌ಗಳಲ್ಲಿ ಒಂದಾಗಿದೆ. ಇಲ್ಲಿ ದೈನಂದಿನ ಜೀವನದ ಘಟನೆಗಳನ್ನು ಮಂಗಳೂರು ಕನ್ನಡ ಮತ್ತು ತುಳು ಮಿಶ್ರಿತ ಭಾಷೆಯಲ್ಲಿ ಹಾಸ್ಯದ ಮೂಲಕ ಹಂಚಲಾಗುತ್ತಿದೆ. 'ಟ್ರೋಲ್ ಮಂಗಳೂರು'– ಇಲ್ಲಿ ಸ್ಥಳೀಯ ರಾಜಕೀಯ, ಸಿನಿಮಾ ಮತ್ತು ಸಂಸ್ಕೃತಿಯನ್ನು ಮಂಗಳೂರು ಶೈಲಿಯ ಕನ್ನಡದಲ್ಲಿ ಟ್ರೋಲ್ ಮಾಡುವುದು ಇದರ ವಿಶೇಷತೆ. 'ನಮ್ಮ ಕುಡ್ಲ' ಎಂಬುದು ಫೇಸ್‌ಬುಕ್‌ನ ಮಂಗಳೂರಿನ ಸ್ಥಳೀಯ ಸುದ್ದಿ ಮತ್ತು ಸಂಸ್ಕೃತಿಯ ಬಗ್ಗೆ ಅಪ್‌ಡೇಟೆಡ್ ಮಾಹಿತಿ ನೀಡುವ ದೊಡ್ಡ ಸಮುದಾಯವಾಗಿದೆ. ಮಂಗಳೂರು ಕನ್ನಡದ ಗತ್ತು ಮತ್ತು

ಸರಳತೆಯನ್ನು ಸಾರುವ ಸಿನಿಮಾ ಪ್ರತಿಭೆಗಳ ಪುಟಗಳು ಪ್ರಸಿದ್ಧಿಯಾಗಿವೆ. ರಾಜ್ ಬಿ. ಶೆಟ್ಟಿ, ರೂಪೇಶ್ ಶೆಟ್ಟಿ ಇತ್ಯಾದಿ. 'ಮಂಗಳೂರಿಯನ್ ರೆಸಿಪೀ' – ಮಂಗಳೂರಿನ ವಿಶಿಷ್ಟ ಅಡುಗೆಗಳ ಪೇಜ್. ಮೀನು ಸಾರು, ನೀರ್ ದೋಸೆ, ಕಡುಬು ಮುಂತಾದ ಸಾಂಪ್ರದಾಯಿಕ ಅಡುಗೆಗಳ ವಿವರಣೆಯನ್ನು ನೀಡುವಾಗ ಪದಾರ್ಥಗಳ ಉಚ್ಚಾರಣೆಯೇ ಒಂದು ಚಂದ. ಇಂಥಾ ಪುಟಗಳಲ್ಲಿ ಕಾಮೆಂಟ್ ಸೆಕ್ಷನ್‌ನಲ್ಲಿ ಕಾಮೆಂಟ್ ಮಂಗಳೂರು ಭಾಷೆಯಲ್ಲಿ ರಸವತ್ತಾಗಿರುತ್ತದೆ. #ಕುಡ್ಲ, #ತುಳುನಾಡ್, #ಕೋಸ್ಟಲ್ ಕರ್ನಾಟಕ, #ಮಂಗಳೂರ್ ಕನ್ನಡ ಕೀವರ್ಡ್‌ಗಳನ್ನು ಬಳಸಿ ಇವುಗಳನ್ನು ನೋಡಬಹುದು. ಅನೇಕ ಹಿರಿಯ ಮತ್ತು ಯುವ ಕವಿಗಳು ಮಂಗಳೂರು ಕನ್ನಡದಲ್ಲೇ ಸಣ್ಣ ಕಥೆ ಅಥವಾ ಕವನಗಳನ್ನು ಫೇಸ್‌ಬುಕ್‌ನಲ್ಲಿ ಬರೆಯುತ್ತಾರೆ. ಇದು ಭಾಷೆಯ ಸಾಹಿತ್ಯಕ ಮೌಲ್ಯವನ್ನು ಹೆಚ್ಚಿಸುತ್ತದೆ. ಹೊರನಾಡಿನಲ್ಲಿರುವ ಮಂಗಳೂರಿಗರು ಫೇಸ್‌ಬುಕ್ ಗ್ರೂಪ್‌ಗಳ ಮೂಲಕ ತಮ್ಮ ಭಾಷೆಯಲ್ಲೇ ಮಾತುಕತೆ ನಡೆಸುವುದರಿಂದ ಭಾಷೆಯ ಮೇಲಿನ ಹಿಡಿತ ತಪ್ಪುವುದಿಲ್ಲ.

ಯೂಟ್ಯೂಬ್ ವೇದಿಕೆಯೂ ಮಂಗಳೂರು ಕನ್ನಡಿಗರ ಅಸ್ಮಿತೆಯನ್ನು ಹೊಂದುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಮಂಗಳೂರು ಕನ್ನಡದಲ್ಲಿರುವ ಹಾಸ್ಯ ಮತ್ತು ಸಂಸ್ಕೃತಿಯನ್ನು ಈ ಮೂಲಕ ಜಗತ್ತು ಕಾಣುವಂತಾಗಿದೆ. ವಿನೀತ್ ಕುಮಾರ್ ಮತ್ತು ತಂಡದ ಎಂಸಿಎಫ್ ಕಾಮಿಡಿ ಒರಿಜಿನಲ್ಸ್ (ಮಿಡಲ್ ಕ್ಲಾಸ್ ಫ್ಯಾಮಿಲಿ)– ಎಂಬ ಜನಪ್ರಿಯ ಚಾನೆಲ್‌ನಲ್ಲಿ ಮಂಗಳೂರು ಕನ್ನಡ ಮತ್ತು ತುಳು ಮಿಶ್ರಿತ ಭಾಷೆಯಲ್ಲಿ ಮಧ್ಯಮ ವರ್ಗದ ಜನರ ಜೀವನವನ್ನು ಹಾಸ್ಯಮಯವಾಗಿ ಚಿತ್ರಿಸುತ್ತಿದ್ದಾರೆ. 'ಕಾಮಿಡಿ ಕಂಪನಿ ಮಂಗಳೂರ್' – ಕೊಂಕಣಿ ಮತ್ತು ಮಂಗಳೂರು ಕನ್ನಡದ ನಾಟಕಗಳು ಹಾಗೂ ಹಾಸ್ಯ ಸನ್ನಿವೇಶಗಳಿಗೆ ಈ ಚಾನೆಲ್ ಪ್ರಸಿದ್ಧವಾಗಿದೆ. 'ಮೆಟ್ರೋಸಾಗಾ' ಚಾನೆಲ್ ''ಡೇಟಿಂಗ್ ಮಂಗಳೂರಿಯನ್'' ನಂತಹ ವೀಡಿಯೋಗಳ ಮೂಲಕ ಮಂಗಳೂರು ಕನ್ನಡದ ವಿಶಿಷ್ಟ ಶೈಲಿಯನ್ನು ಹಾಸ್ಯರೂಪದಲ್ಲಿ ಪರಿಚಯಿಸುತ್ತಿದ್ದಾರೆ. ಗಣೇಶ್ ಕಾರಂತ್– ಇವರು ಮಂಗಳೂರು ಕನ್ನಡದಲ್ಲಿ ಮಾತನಾಡುತ್ತಾ ಮಾಡುವ ವೈನ್ಸ್‌ಗಳು ಮತ್ತು ಸಣ್ಣ ಹಾಸ್ಯ ವೀಡಿಯೋಗಳು ಅತ್ಯಂತ ಜನಪ್ರಿಯವಾಗಿವೆ. ವಿಶೇಷವಾಗಿ ಮಂಗಳೂರು ಜನರ ಆಡುಭಾಷೆಯನ್ನು ಇವರು ಸೊಗಸಾಗಿ ಬಳಸುತ್ತಾರೆ. ಮಿಸ್ಟರ್ ಅಂಡ್ ಮಿಸಸ್ ಕಾಮತ್ ಇವರು ತಮ್ಮ ದೈನಂದಿನ ಜೀವನ ಮತ್ತು ಪ್ರವಾಸದ ವೀಡಿಯೋಗಳಲ್ಲಿ ಮಂಗಳೂರು ಕನ್ನಡವನ್ನು ಬಳಸುತ್ತಾರೆ. ದಾಯಜಿವಲ್ಡ್ ಟೆಲಿವಿಷನ್ – ಎಂಬುದು ಯೂಟ್ಯೂಬ್‌ನಲ್ಲಿ ಮಂಗಳೂರಿನ ಪ್ರಾದೇಶಿಕ ಚಾನೆಲ್ ಆಗಿದ್ದು, ಇಲ್ಲಿನ ಅನೇಕ ಕಾರ್ಯಕ್ರಮಗಳು ಮಂಗಳೂರು ಕನ್ನಡದಲ್ಲಿವೆ. ದೀಪಿಕಾ ಅಡ್ತಾಳೆ– ಇವರು ಕೂಡ ಮಂಗಳೂರು ಕನ್ನಡದಲ್ಲಿ ಹಾಸ್ಯ, ಅಡುಗೆ ಮತ್ತು ಸ್ಥಳೀಯ ಸಂಭಾಷಣೆಗಳ ವೀಡಿಯೋಗಳನ್ನು ಮಾಡುತ್ತಾರೆ. ರೂಪೇಶ್ ಶೆಟ್ಟಿ ಅಫೀಶಿಯಲ್ ಚಾನೆಲ್‌ನಲ್ಲಿ ಬಿಗ್‌ಬಾಸ್ ಖ್ಯಾತಿಯ ರೂಪೇಶ್ ಶೆಟ್ಟಿ ಅವರು ತಮ್ಮ ವ್ಲಾಗ್‌ಗಳಲ್ಲಿ ಮಂಗಳೂರು ಕನ್ನಡ ಮತ್ತು ತುಳು ಎರಡೂ ಭಾಷೆಗಳನ್ನು ಬಳಸುತ್ತಾ, ಕರಾವಳಿ ಈವೆಂಟ್‌ಗಳು ಮತ್ತು ಶೂಟಿಂಗ್

ಅನುಭವಗಳನ್ನು ಹಂಚಿಕೊಳ್ಳುತ್ತಾರೆ. 'ಕೋಸ್ಟಲ್ ಹಟ್'– ಇದು ಕರಾವಳಿಯ ಪಕ್ಕಾ ಅಡುಗೆಗಳಿಗಾಗಿಯೇ ಇರುವ ಚಾನೆಲ್. ಇದರಲ್ಲಿ ಮಂಗಳೂರು ಕನ್ನಡದಲ್ಲಿ ಮಾಂಸಾಹಾರಗಳನ್ನು ತಯಾರಿಸುವ ವೀಡಿಯೋಗಳಿವೆ. 'ಅಮ್ಮಾಸ್ ರೆಸಿಪೀಸ್' – ಕರಾವಳಿ ಭಾಗದ ಬ್ರಾಹ್ಮಣ ಶೈಲಿಯ ಅಡುಗೆಗಳನ್ನು ಕಲಿಯಲು ಇದು ಉತ್ತಮ ಚಾನೆಲ್ ಆಗಿದ್ದು, ಮಂಗಳೂರು ಕನ್ನಡದ ಶಾಂತ ಶೈಲಿಯ ನಿರೂಪಣೆ ಇಲ್ಲಿದೆ. ಕೋಸ್ಟಲ್ ರೆಸಿಪೀ ಎಂಬುದು ಕೂಡ ಅಡುಗೆಯ ಚಾನೆಲ್ ಆಗಿದೆ.

**ಉಪಸಂಹಾರ:**

ಒಂದು ಭಾಷೆಯ ಉಳಿವು ಮತ್ತು ಬೆಳವಣಿಗೆಯು ಆ ಭಾಷೆಯನ್ನು ಬಳಸುವ ಜನರ ಸಾಂಸ್ಕೃತಿಕ ಪ್ರಜ್ಞೆಯನ್ನು ಅವಲಂಬಿಸಿರುತ್ತದೆ. ಮೇಲಿನ ಎಲ್ಲಾ ಮಾಹಿತಿಗಳು ತಂತ್ರಜ್ಞಾನವು ಪ್ರಾದೇಶಿಕ ಉಪಭಾಷೆಗಳಿಗೆ ಹೊಸ ಆಯಾಮವನ್ನು ತಂದು ಕೊಟ್ಟಿರುವುದಕ್ಕೆ ಸಾಕ್ಷಿಯಾಗಿದೆ. ಹವ್ಯಕ ಕನ್ನಡ, ಮಂಗಳೂರು ಕನ್ನಡ ಮತ್ತು ಅರೆಭಾಷೆಯ ವಿಶಿಷ್ಟ ವ್ಯಾಕರಣ, ಧ್ವನಿವಿಜ್ಞಾನ ಮತ್ತು ಶಬ್ದಕೋಶಗಳು ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಮತ್ತು ಯೂಟ್ಯೂಬ್‌ಗಳ ಮೂಲಕ ಜಾಗತಿಕ ಕನ್ನಡಿಗರನ್ನು ತಲುಪುತ್ತಿದೆ. ಈ ಭಾಷಿಕರಲ್ಲಿ ಇದು ''ನಮ್ಮ ಭಾಷೆ ನಮ್ಮ ಹೆಮ್ಮೆ'' ಎಂಬ ಹೊಸ ಅಸ್ಮಿತೆಯನ್ನು ಮೂಡಿಸಿದೆ. ಶಿಷ್ಟ ಕನ್ನಡದ ಪ್ರಭಾವದಿಂದ ಈ ಉಪಭಾಷೆಗಳು ಮೂಲೆಗುಂಪಾಗುವ ಆತಂಕ ಸದಾ ಇತ್ತು. ಆದರೆ ಸಾಮಾಜಿಕ ಮಾಧ್ಯಮದ ಕಂಟೆಂಟ್ ಕ್ರಿಯೇಟರ್‌ಗಳು ಈ ಭಾಷೆಗಳನ್ನು ಬಳಸುವ ಮೂಲಕ ಇವುಗಳನ್ನು ಕ್ರಿಯಾತ್ಮಕ ಭಾಷೆಗಳನ್ನಾಗಿ ಮಾಡಿದ್ದಾರೆ. ಈ ವೇದಿಕೆಗಳಿಂದಾಗಿ ಪ್ರಾದೇಶಿಕ ಸೊಗಡಿನ ಮಾತುಗಳು ಇಂದು ಕೀಳರಿಮೆಯ ಸಂಕೇತವಾಗದೆ, ವಿಶಿಷ್ಟ ವ್ಯಕ್ತಿತ್ವದ ಗುರುತಾಗಿ ಮಾರ್ಪಟ್ಟಿವೆ. ಒಟ್ಟಾರೆಯಾಗಿ ಹೇಳುವುದಾದರೆ, ಹವ್ಯಕ, ಮಂಗಳೂರು ಕನ್ನಡ ಮತ್ತು ಅರೆಭಾಷೆಗಳು ಕೇವಲ ಸಂವಹನ ಮಾಧ್ಯಮಗಳಲ್ಲ; ಅವು ಇಂದು ಕರ್ನಾಟಕದ ಸಾಂಸ್ಕೃತಿಕ ವೈವಿಧ್ಯತೆಯ ಜೀವನಾಡಿಗಳಾಗಿವೆ. ಸಾಮಾಜಿಕ ಮಾಧ್ಯಮಗಳು ಈ ಉಪಭಾಷೆಗಳಿಗೆ ವೇದಿಕೆಯನ್ನು ಕಲ್ಪಿಸಿಕೊಡುವ ಮೂಲಕ ಆ ಭಾಷೆಯ ಅಸ್ಮಿತೆಯನ್ನು ಮೂಡಿಸಿವೆ.

## ಕೊನೆ ಟಿಪ್ಪಣಿಗಳು:

1. ಮೊಸರು ಆಧಾರಿತ ತಂಪು ನೀಡುವ ಖಾದ್ಯ. ವಿವಿಧ ಗಿಡಮೂಲಿಕೆಗಳು, ಸೊಪ್ಪುಗಳು, ತರಕಾರಿಗಳು, ಬೇರುಗಳು ಮತ್ತು ಹೂವುಗಳಿಂದ ತಯಾರಿಸುತ್ತಾರೆ.
2. ಮಾವಿನಕಾಯಿ ಅಥವಾ ಇತರ ಹುಳಿ ಹಣ್ಣುಗಳಿಂದ ಮಾಡುವ ಹುಳಿ ಮತ್ತು ಖಾರ ಮಿಶ್ರಿತ ಸಾರು.
3. ಕರ್ನಾಟಕ ಸರ್ಕಾರದ ಅಡಿಯಲ್ಲಿ ಅರೆಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಸಂರಕ್ಷಿಸಲು, ಪ್ರೋತ್ಸಾಹಿಸಲು ಸ್ಥಾಪನೆಗೊಂಡ ಸಂಸ್ಥೆ. ಇದನ್ನು ಕರ್ನಾಟಕ ಸರ್ಕಾರವು 2011 ರಲ್ಲಿ ಸ್ಥಾಪಿಸಿತು. ಈ ಅಕಾಡೆಮಿಯ ಕೇಂದ್ರ ಕಛೇರಿ ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿದೆ.
4. ಡಿಜಿಟಲ್ ಲೋಕದಲ್ಲಿ ಮಾಹಿತಿ, ಮನರಂಜನೆ, ಶಿಕ್ಷಣ, ಆಡಿಯೋ, ವೀಡಿಯೋ, ಬರಹ ಅಥವಾ ಚಿತ್ರಗಳ ಮೂಲಕ ಜನರಿಗೆ ಅವುಗಳನ್ನು ತಲುಪಿಸುವವರು.

## ಪರಾಮರ್ಶನ ಗ್ರಂಥಗಳು:


1. ಕೆಂಪೇಗೌಡ ಕೆ., (1996), ಸಾಮಾನ್ಯ ಭಾಷಾವಿಜ್ಞಾನ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
2. ನವೀನ್‌ಕುಮಾರ್‌ಎಚ್.ಸಿ., (2010), ಆ ಭಾಷೆ ಈ ಭಾಷೆಯಂತಲ್ಲ ಈ ಈ-ಭಾಷೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ನಾರಾಯಣ ಕೆ.ವಿ., (2007), ಕನ್ನಡ ಜಗತ್ತು: ಅರ್ಧಶತಮಾನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
4. ನಾರಾಯಣ ಕೆ.ವಿ. (ಸಂ), (2005), ಭಾಷೆ ವಿಶ್ವಕೋಶ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
5. ಮಹದೇವಯ್ಯ ಪಿ., (2000), ಸಾಮಾಜಿಕ ಉಪಭಾಷೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. ಲಾವಣ್ಯ ಸಿ.ಪಿ., (2021), ಕೊಡಗಿನ ಗೌಡ ಕನ್ನಡದ ಭಾಷಿಕ ನೆಲೆಗಳು, ಮೈಸೂರು: ದೀಪ್ತಿ ಬುಕ್ ಹೌಸ್.
7. ಶಂಕರ ಭಟ್ ಡಿ.ಎನ್., (2017), ಹವ್ಯಕ ಕನ್ನಡ, ಮೈಸೂರು: ಶಂಕರ ಭಟ್ ಡಿ.ಎನ್.
8. ಸಂಗಮೇಶ ಸವದತ್ತಿಮಠ, (1998), ಕನ್ನಡ ಭಾಷಾಪ್ರಭೇದಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
9. ಸಾಂಬಮೂರ್ತಿ ಬಿ. (ಸಂ), (2009), ಕನ್ನಡ ತಂತ್ರಜ್ಞಾನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.